## ಸೀಮೆಎಣ್ಣೆ ಮಿಕ್ಸ್

ಇದು 80ರ ದಶಕದಲ್ಲಿ ನಡೆದ ಘಟನೆ. ಬೆಂಗಳೂರಿಂದ ನಮ್ಮ ಹಳ್ಳಿಗೆ ಹೋಗಿದ್ದೆ. ಅಲ್ಲಿ ಓಡಾಡುವ ದ್ವಿಚಕ್ರ ವಾಹನಗಳು ತುಂಬಾ ಹೊಗೆ ಉಗುಳುವುದನ್ನು ಗಮನಿಸಿ, ನನ್ನ ಅಣ್ಣನ ಮಗ ಪ್ರಣವನಿಗೆ, 'ಏನ್ ಮಾರಾಯಾ, ನಿಮ್ಮೂರಿನ ಬೈಕ್‌ಗಳೆಲ್ಲಾ ಹೊಗೆ ಉಗುಳಿ ಶಬ್ದ ಮಾಡುತ್ತವಲ್ಲಾ?' ಎಂದೆ. 'ಇಲ್ಲಿ ಪೆಟ್ರೋಲ್ ಸಿಗುವುದಿಲ್ಲ. 30 ಕಿ.ಮೀ ದೂರದ ತಾಲ್ಲೂಕು ಕೇಂದ್ರದಿಂದ ಪೆಟ್ರೋಲ್ ತಂದು ಅದಕ್ಕೆ ಸೀಮೆಎಣ್ಣೆ ಮಿಕ್ಸ್ ಮಾಡಿ ಇಲ್ಲಿ ಮಾರುತ್ತಾರೆ. ಅದನ್ನೇ ಬೈಕ್‌ಗಳಿಗೆ ಹಾಕುತ್ತಾರೆ. ಅದಕ್ಕೇ ಹೀಗೆ' ಎಂದ. ನಂತರ ನಾನು ವಾಪಸ್ಸು ಬೆಂಗಳೂರಿಗೆ ಬರುವಾಗ ಶಾಲೆಗೆ ರಜೆ ಇದೆ ಎಂದು ಅವನೂ ಜೊತೆ ಬಂದ. ಒಂದು ದಿನ ಅವನಿಗೆ ವಿಮಾನ ತೋರಿಸಲೆಂದು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋದೆ. ನಿಲ್ದಾಣದಿಂದ ಹೊರಟ ವಿಮಾನವೊಂದು ಅತಿಯಾದ ಹೊಗೆ ಉಗುಳುತ್ತಾ ರನ್‌ವೇಯಲ್ಲಿ ಸಾಗಿತ್ತು. ಅದನ್ನು ನೋಡಿದವನೇ, 'ಓಹೋ, ಇಲ್ಲೂ ಪೆಟ್ರೋಲ್‌ಗೆ ಸೀಮೆಎಣ್ಣೆ ಮಿಕ್ಸ್ ಮಾಡಿ ವಿಮಾನಕ್ಕೆ ಹಾಕ್ತಾರಾ?' ಎಂದು ಪ್ರಶ್ನಿಸಿದ್ದ!



**ನಗರ ಗುರುದೇವ್ ಭಂಡಾರ್ಕರ್**



## ಸೂ... ಸು

ಅದೊಂದು ದಿನ ನಮ್ಮ ಕುಟುಂಬದ ಮಿತ್ರರು ನಮ್ಮ ಮನೆಯಲ್ಲಿ ಸೇರಿದ್ದರು. ಮನೆಪಕ್ಕದ ಮೂರು ವರ್ಷದ ಪುಟ್ಟ ರಿಯಾ ಅವರಮ್ಮನ ಬಳಿ ಹೋಗಿ, 'ಮಮ್ಮಾ, ಸೂ...ಸು' ಅಂದದ್ದು ಕೇಳಿ ಅವರಮ್ಮ ತಕ್ಷಣ ಬಾತ್‌ರೂಮಿಗೆ ಕರೆದೊಯ್ದಾಗ ಒಂದೇ ಸಮನೆ ಗಲಾಟೆ ಆರಂಭಿಸಿದಳು. 'ಸೂಸೂ ಅಲ್ಲ, ಸೂಸು' ಅಂತ ಪುನಃ ಅಳಲಾರಂಭಿಸಿದಳು. ನಮಗ್ಯಾರಿಗೂ ಅರ್ಥವಾಗಲಿಲ್ಲ. ತುಸು ಸಮಯದ ಬಳಿಕ ಡೈನಿಂಗ್ ಟೇಬಲ್ ಕಡೆ ಕೈ ತೋರಿಸುತ್ತ, 'ಸೂಸು... ಸೂಸು...' ಅಂತ ಗಾಜಿನ ಲೋಟಗಳಲ್ಲಿ ಇಟ್ಟಿದ್ದ ಜ್ಯೂಸ್ ಕಡೆ ತೋರಿಸಿದಾಗಲೇ ಗೊತ್ತಾದದ್ದು, ಜ್ಯೂಸು ಅವಳ ಬಾಯಲ್ಲಿ 'ಸೂಸು' ಅಂತಾಗಿದೆ ಎಂದು!

**ಸುಮನಾ**